# ಕ್ಯಾನ್ಸರ್; ಮುನ್ನೆಚ್ಚರಿಕೆ ಅಗತ್ಯ



ವಿಶ್ವದ ಕ್ಯಾನ್ಸರ್ ಬಾಧಿತ ದೇಶಗಳಲ್ಲಿ ಭಾರತ 5 ನೇ ಸ್ಥಾನ ಪಡೆದಿದೆ. ಭಾರತದಲ್ಲಿ ಪ್ರತಿ ವರ್ಷ 10 ಲಕ್ಷ ಜನರಲ್ಲಿ ಕ್ಯಾನ್ಸರ್ ರೋಗ ಪತ್ತೆಯಾಗುತ್ತದೆ. ಕ್ಯಾನ್ಸರ್ ವ್ಯಾಪಕವಾಗುತ್ತಿದೆ; ಪೀಡಿತರು ಹೆಚ್ಚುತ್ತಿದ್ದಾರೆ. ಸೂಕ್ತ ಮುನ್ನೆಚ್ಚರಿಕೆ ಅತ್ಯಗತ್ಯ.

**■ ಡಾ.ಗುರಲಿಂಗಪ್ಪ ಅಂಕದ**

ಸದ್ಯ ಭಾರತದಲ್ಲಿ ಮಧುಮೇಹ, ಅಧಿಕ ರಕ್ತದೊತ್ತಡಗಳು ಸಾಮಾನ್ಯವಾಗಿ ಕಂಡುಬರುವ ಸಮಸ್ಯೆಗಳು. ಇವುಗಳ ಸರಣಿಗೆ ಕ್ಯಾನ್ಸರ್ ನಂತಹ ಕಾಯಿಲೆಗಳು ಸೇರುತ್ತಿರುವುದು ಆತಂಕಕಾರಿ ವಿಷಯ. ಬಹುತೇಕವಾಗಿ ಈ ರೋಗ ಅಂತಿಮ ಹಂತದಲ್ಲಿಯೇ ಪತ್ತೆಯಾಗುತ್ತದೆ. ಈ ಕಾಯಿಲೆ ಕೊನೆಯ ಹಂತದಲ್ಲಿದ್ದಾಗ ಗುಣಮುಖವಾಗುವ ಸಾಧ್ಯತೆ ಅತೀ ಕಡಿಮೆ. ಭಾರತದಲ್ಲಿ ಈ ಬಗ್ಗೆ ಇನ್ನೂ ಹೆಚ್ಚಿನ ಜಾಗೃತಿ ಮೂಡಬೇಕಿದೆ.

ವಿಶ್ವದ ಕ್ಯಾನ್ಸರ್ ಬಾಧಿತ ದೇಶಗಳಲ್ಲಿ ಭಾರತ 5 ನೇ ಸ್ಥಾನ ಪಡೆದಿದೆ. ಭಾರತದಲ್ಲಿ ಪ್ರತಿ ವರ್ಷ 10 ಲಕ್ಷ ಜನರಲ್ಲಿ ಕ್ಯಾನ್ಸರ್ ರೋಗ ಪತ್ತೆಯಾಗುತ್ತದೆ. ಇವರಲ್ಲಿ ಶೇ. 95 ರಷ್ಟು ಜನರಲ್ಲಿ ಕಂಡುಬರುವ ಕ್ಯಾನ್ಸರ್ ಗೆ ತಂಬಾಕು ಸೇವನೆಯೇ ಕಾರಣ. ತಂಬಾಕಿನಿಂದ ಮುಖ್ಯವಾಗಿ ಬಾಯಿ, ಗಂಟಲು, ಶ್ವಾಸಕೋಶ, ಅನ್ನನಾಳ, ಕರುಳು, ಮೂತ್ರಪಿಂಡ ಮುಂತಾದ ಅಂಗಗಳು ಕ್ಯಾನ್ಸರ್‌ನಿಂದ ಪೀಡಿತವಾಗುತ್ತವೆ. ಇನ್ನು ಧೂಮಪಾನದಿಂದ ಹೆಚ್ಚಾಗಿ ಶ್ವಾಸಕೋಶದ ಕ್ಯಾನ್ಸರ್ ಬರುತ್ತದೆ.

**ಸ್ತನ ಕ್ಯಾನ್ಸರ್:** ಕ್ಯಾನ್ಸರ್ ಪೀಡಿತರಲ್ಲಿ ಸ್ತನ ಕ್ಯಾನ್ಸರ್ ಎರಡನೆ ಸ್ಥಾನ ಹೊಂದಿದೆ. ದಾಖಲಾದ ಕ್ಯಾನ್ಸರ್ ರೋಗಿಗಳ ಸಂಖ್ಯೆಯ ಪ್ರಕಾರ ಪ್ರತಿ ಲಕ್ಷ ಜನರಲ್ಲಿ 36 ಜನರು ಸ್ತನ ಕ್ಯಾನ್ಸರ್ ಗೆ ಗುರಿಯಾದವರಿದ್ದಾರೆ. ಸಾಮಾನ್ಯವಾಗಿ 55 ವರ್ಷ ದಾಟಿದ ಮಹಿಳೆಯರಲ್ಲಿ ಸ್ತನ ಕ್ಯಾನ್ಸರ್ ಕಂಡುಬರುತ್ತದೆ. ಹದಿಹರೆಯದ ಯುವತಿಯರೂ ಕ್ಯಾನ್ಸರ್ ಪೀಡಿತರಾಗುತ್ತಿದ್ದಾರೆ.

**ಕಾರಣವೇನು?:** ಶೇ. 10–15 ರಷ್ಟು ಆನುವಂಶೀಯತೆ, ಮದುವೆ ವಿಳಂಬವಾಗಿ ಆಗುವುದು, ಎದೆ ಹಾಲುಣಿಸುವುದು ಕಡಿಮೆಯಾದಾಗ, ಅತೀ ಗರ್ಭ ನಿರೋಧಕ ಮಾತ್ರೆ ಸೇವನೆ, ಆರಾಮದಾಯಕ ಜೀವನಶೈಲಿ, ಮದ್ಯಪಾನ ಹಾಗೂ ಧೂಮಪಾನ.

**ಲಕ್ಷಣಗಳು:** ಸ್ತನದ ಗಾತ್ರ, ಬಣ್ಣ, ಸ್ವರೂಪದಲ್ಲಿ ಬದಲಾವಣೆ, ಮೊಲೆ ತೊಟ್ಟು ಒಳಮುಖವಾಗಿ ಮಡಚಿಕೊಂಡು ಅದರಿಂದ ರಕ್ತ ಅಥವಾ ಕೀವು ಸ್ರವಿಸಬಹುದು. ಆದ್ದರಿಂದ ಮಹಿಳೆಯರು ತಮ್ಮ ಸ್ತನದಲ್ಲಿ ಆಗುತ್ತಿರುವ ಎಲ್ಲ ಬದಲಾವಣೆಗಳನ್ನು ಗಮನಿಸುತ್ತಿದ್ದು ತೊಂದರೆ ಇದ್ದರೆ ಸಂಕೋಚಪಡದೇ ವಿಳಂಬ ಮಾಡದೇ ತಜ್ಞ ವೈದ್ಯರಿಂದ ವೈದ್ಯಕೀಯ ತಪಾಸಣೆ, ಮ್ಯಾಮೋಗ್ರಫಿ, ಎಂಆರ್‌ಐ, ಅಲ್ಟ್ರಾಸೌಂಡ್ ಮುಂತಾದ ಪರೀಕ್ಷೆಗಳನ್ನೂ ಮಾಡಿಸಿಕೊಳ್ಳಬೇಕು.

**ಚಿಕಿತ್ಸೆ:** ಆರಂಭಿಕ ಹಂತದಲ್ಲಿ ಸೆಂಟಿನಲ್ ನೋಡ್ ಬಯಾಪ್ಸಿ ತಂತ್ರದಿಂದ ಸ್ತನವನ್ನೇ ತೆಗೆದು ಆಂಕೊಪ್ಲಾಸ್ಟಿಯ ತಂತ್ರಜ್ಞಾನದಿಂದ ಮತ್ತೆ ಸ್ತನದ ಮರುಜೋಡಣೆಯನ್ನೂ ಮಾಡಬಹುದು. ಇಲ್ಲದಿದ್ದರೆ ರೋಗಿಗೆ ಕೀಮೊಥೆರಪಿ, ರೇಡಿಯೊಥೆರಪಿ, ಹಾರ್ಮೋನ್ ಥೆರಪಿ ಹಾಗೂ ಟಾರ್ಗೆಟ್ ಥೆರಪಿಯಂತಹ ಚಿಕಿತ್ಸೆಗೆ ಒಳಪಡಿಸಬಹುದು.

**ಫೆಬ್ರುವರಿ 4 ವಿಶ್ವ ಕ್ಯಾನ್ಸರ್ ದಿನ**

**ಪಿತ್ತಜನಕಾಂಗ (ಯಕೃತ್)ದ ಕ್ಯಾನ್ಸರ್:** ಸಾಮಾನ್ಯವಾಗಿ ಇದು ಯಾವುದೇ ಲಕ್ಷಣಗಳನ್ನು ಹೊರಹಾಕದೇ ಒಳಗೇ ಬೆಳೆದು ಜೀವಕ್ಕೆ ಮಾರಕವಾಗಬಹುದು. ಆದ್ದರಿಂದ ಸಿರೋಸಿಸ್ ನಿಂದ ಪೀಡಿತರು ಜಾಗೃತರಾಗಿ ಅಗತ್ಯ ಪರೀಕ್ಷೆಗೆ ಒಳಪಡುವುದು ಅತೀ ಮುಖ್ಯ. ಈ ಅಂಗ ಶರೀರದಲ್ಲಿನ ಕೊಬ್ಬು ಕರಗಿಸಲು ಹಾಗೂ ಚಯಾಪಚಯ ಕ್ರಿಯೆ ಸುಗಮಗೊಳಿಸಲು ಸಹಕರಿಸುತ್ತದೆ. ಪಿತ್ತಜನಕಾಂಗದಲ್ಲಿ ಹುಟ್ಟುವ ಒಂದು ವಿಧವಾದ ಗಡ್ಡೆಯೇ ಪಿತ್ತಜನಕಾಂಗದ ಕ್ಯಾನ್ಸರ್.

ಕಾರಣ: ಅತೀ ಮದ್ಯಪಾನ, ವೈರಲ್ ಹೆಪೆಟೈಟಿಸ್, ಹೆಪಟೈಟಿಸ್‌ಬಿ, ಹೆಪಟೈಟಿಸ್‌ಸಿ ವೈರಸ್ ಗಳಂಥ ಗಂಭೀರ ಸೋಂಕುಗಳಿಂದ ಪಿತ್ತಜನಕಾಂಗದ ಕ್ಯಾನ್ಸರ್ ನ ಅಪಾಯ ಹೆಚ್ಚುವ ಸಾಧ್ಯತೆ ಇರುತ್ತದೆ. ಆದರೆ ಈ ಸೋಂಕಿನಿಂದ ಎಲ್ಲರೂ ಕ್ಯಾನ್ಸರ್ ಗೆ ಒಳಗಾಗುತ್ತಾರೆಂದು ಹಾಗೂ ಇಂಥದ್ದೇ ಕಾರಣದಿಂದ ಕ್ಯಾನ್ಸರ್ ಬರುತ್ತದೆಂದು ಹೇಳಲು ಸಾಧ್ಯವಿಲ್ಲ.

ಲಕ್ಷಣ: ಹಸಿವು, ತೂಕ ಕಡಿಮೆಯಾಗುವುದು, ಹೊಟ್ಟೆ ಭಾಗದಲ್ಲಿ ನೋವು, ಜ್ವರ, ಕಾಮಾಲೆ ರೋಗ ಇತ್ಯಾದಿಗಳಿರಬಹುದು ಅಥವಾ ಯಾವುದೇ ಲಕ್ಷಣಗಳು ಕಾಣದೆಯೂ ಇರಬಹುದು. ಸಾಮಾನ್ಯವಾಗಿ ಅಲ್ಟ್ರಾಸೌಂಡ್ ಸ್ಕ್ಯಾನ್, ಸಿಟಿ ಸ್ಕ್ಯಾನ್, ಎಂಆರ್‌ಐ ಗಳಿಂದ ಕ್ಯಾನ್ಸರ್ ಪತ್ತೆ ಹಚ್ಚಬಹುದು.

ಚಿಕಿತ್ಸೆಗಡ್ಡೆಯನ್ನು ಸಾಮಾನ್ಯವಾಗಿ ಪಿತ್ತಜನಕಾಂಗ ಅಂಗಾಂಗಗಳೊಂದಿಗೆ ತೆಗೆದು ಹಾಕುವುದು ಅತ್ಯುತ್ತಮ ಆದರೆ ಗಡ್ಡೆ ಪಿತ್ತಜನಕಾಂಗಕ್ಕೆ ರಕ್ತ ಪೂರೈಸುವ ರಕ್ತನಾಳಗಳಲ್ಲಿ ಹರಡಿದ್ದರೆ ಇದು ಸಾಧ್ಯವಿಲ್ಲ. ಇದಲ್ಲದೆ ರೇಡಿಯೊ ಫ್ರೀಕ್ವೆನ್ಸಿ ವೇವ್ ನ ತಾಪದಿಂದಲೂ ಗಡ್ಡೆಯನ್ನು ಕತ್ತರಿಸಿ ತೆಗೆಯಬಹುದು. ಪಿತ್ತಜನಕಾಂಗದ ಆರೋಗ್ಯಕ್ಕೆ ಸಮತೋಲಿತ ಆಹಾರ ಸೇವನೆ, ನಿತ್ಯ ವ್ಯಾಯಾಮ, ಮದ್ಯಪಾನ, ಧೂಮಪಾನ ತ್ಯಜಿಸುವುದು ಅತೀ ಮುಖ್ಯ.

**ಪ್ರಾಸ್ಟೇಟ್ ಕ್ಯಾನ್ಸರ್:** ಪುರುಷರಲ್ಲಿ ವಯಸ್ಸಾಗುತ್ತಿದ್ದಂತೆ ಬದಲಾದ ಜೀವನಶೈಲಿ, ಆನುವಂಶಿಕ ಕಾರಣದಿಂದ ಇಂದು ಭಾರತದಲ್ಲಿ 15 ರಲ್ಲಿ ಒಬ್ಬರಿಗೆ ಪ್ರಾಸ್ಟೇಟ್ (ಮೂತ್ರಕೋಶದ ಕಂಠ) ಕ್ಯಾನ್ಸರ್ ಕಾಣಿಸಿ ಕೊಳ್ಳುತ್ತಿರುವುದು ಆತಂಕಕಾರಿ ವಿಷಯ. ■